# ಸಂಪಾದಕೀಯ

## ಜಾಣತನವೂ ಇಲ್ಲ, ವಿವೇಕವೂ ಇಲ್ಲ

ತಪ್ಪು ಮಾಡುವುದು ಸಹಜ. ಆದರೆ ಮಾಡಿದ ತಪ್ಪನ್ನು ತಿದ್ದಿಕೊಳ್ಳುವುದು ಜಾಣತನ. ಮತ್ತೆ ಅದೇ ತಪ್ಪನ್ನು ಮಾಡದಿರುವುದು ವಿವೇಕತನ. ಆದರೆ ಮಾಡಿದ್ದು ತಪ್ಪೆಂದು ತಿಳಿದೂ, ನ್ಯಾಯಾಲಯವೇ ಆ ಕುರಿತಂತೆ ತೀರ್ಪು ನೀಡಿದ್ದರೂ ತಾನು ತಪ್ಪೇ ಮಾಡಿಲ್ಲವೆಂದು ಹೇಳುವುದು ಹುಂಬತನ. ತಾನು ಇನ್ನೂ ಅದೇ ತಪ್ಪನ್ನು ಮಾಡುತ್ತೇನೆ ಎನ್ನುವುದಂತೂ ದಾರ್ಷ್ಟ್ಯತನ. ತಾನು ಮಾಡಿದ ತಪ್ಪನ್ನೆ ಘನತೆಯೆಂಬಂತೆ ಪರಿಗಣಿಸಿ, ತಪ್ಪು ಮಾಡಿದ್ದಕ್ಕೆ ಸಿಗುವ ಶಿಕ್ಷೆಯನ್ನು ಪಾರಿತೋಷಕವೆಂಬಂತೆ ಪ್ರದರ್ಶಿಸುವುದಂತೂ ಅವಿವೇಕದ, ಮೂರ್ಖತನದ ಪರಮಾವಧಿ. ಅದರಲ್ಲಿಯೂ ಸಾರ್ವಜನಿಕ ಜೀವನದಲ್ಲಿರುವವರಿಂದಂತೂ ಇಂತಹ ನಡೆಯನ್ನು ನಿರೀಕ್ಷಿಸಲೇ ಆಗದು. ಸದ್ಯಕ್ಕಂತೂ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಮಾಡುತ್ತಿರುವುದು ಅದನ್ನೆ. ಅವರ ಪಕ್ಷವೂ ಮಾಡುತ್ತಿರುವುದು ಅದನ್ನೆ. ಮಾನಹಾನಿಕರ



ಹೇಳಿಕೆಗೆ ಸಂಬಂಧಿಸಿ ನ್ಯಾಯಾಲಯವೊಂದು ರಾಹುಲ್‌ರನ್ನು ತಪ್ಪಿತಸ್ಥನೆಂದು ಪರಿಗಣಿಸಿ ಶಿಕ್ಷೆ ಘೋಷಿಸಿದಂದಿನಿಂದಲೂ ರಾಹುಲ್ ಆಗಲಿ, ಅವರ ಪಕ್ಷವಾಗಲಿ ಮಾಡಿದ ತಪ್ಪಿಗೆ ಪಶ್ಚಾತ್ತಾಪ ತೋರಿಸುವ ಲವಲೇಶದ ಸಂಕೇತವನ್ನೂ ತೋರುತ್ತಿಲ್ಲ. ಅದರ ಬದಲಾಗಿ ತಪ್ಪನ್ನು ಸಮರ್ಥಿಸಿಕೊಳ್ಳುವ ಹಾಗೂ ಅಂತಹ ತಪ್ಪನ್ನು ಮತ್ತಷ್ಟು ಎಸಗುವ ಉದ್ಧಟತನವನ್ನು ಪ್ರದರ್ಶಿಸುತ್ತಿದೆ.

''ನನ್ನ ಹೆಸರು ಸಾರ್ವಕರ್ ಅಲ್ಲ, ನನ್ನ ಹೆಸರು ಗಾಂಧಿ. ಗಾಂಧಿಗಳು ಎಂದಿಗೂ, ಯಾರಿಗೂ ಕ್ಷಮೆ ಕೋರುವುದಿಲ್ಲ'' ಎಂಬುದಾಗಿ ರಾಹುಲ್ ಉದ್ಧಟತನದಿಂದ ನುಡಿದಿದ್ದಾರೆ. ತಮ್ಮ ತಪ್ಪು ನಡೆಗೆ ಗಾಂಧಿಯವರ ಹೆಸರನ್ನು ಎಳೆದು ತರುವ ಮೂಲಕ ರಾಜಕಾರಣಿಯಾಗಿ ತಾನು ಮಾಡಿದ ಕಾರ್ಯವು ಶ್ಲಾಘನೀಯವಾದುದು ಎಂಬಂತಹ ಧೋರಣೆಯನ್ನು ಅವರು ಪ್ರದರ್ಶಿಸಿದ್ದಾರೆ. ಅವರು ಟ್ವಿಟರ್‌ನಲ್ಲಿ ತಮ್ಮ ಗುರುತನ್ನು 'ಅನರ್ಹಗೊಂಡ ಸಂಸತ್ ಸದಸ್ಯ' ಎಂದು ಬದಲಿಸುವ ಮೂಲಕ ಅಲ್ಲೂ ತನಗೆ ನ್ಯಾಯಾಲಯದಿಂದ ಸಿಕ್ಕಿದ ಶಿಕ್ಷೆ ಮತ್ತು ಸಾಂಸದಿಕ ಸ್ಥಾನದ ಅನರ್ಹತೆಯು ಒಂದು ದೊಡ್ಡ ಪದಕವೆಂಬಂತೆ ಧರಿಸಿಕೊಂಡಿದ್ದಾರೆ.


ಅವರ ಪಕ್ಷವೂ ವರ್ತಿಸುತ್ತಿರುವ ರೀತಿ ವಿಭಿನ್ನವಾಗಿಲ್ಲ. ರಾಹುಲ್‌ರ ಬೆಂಬಲಕ್ಕೆ ನಿಲ್ಲುವ ಭರದಲ್ಲಿ ತಾನೂ ಅದೇ ತಪ್ಪನ್ನು ಎಸಗುತ್ತಿದೆ. ಪ್ರತಿಯೊಬ್ಬರ ಹೇಳಿಕೆಯೂ ನ್ಯಾಯಾಂಗವನ್ನೆ ಟೀಕಿಸುವಂತಿದೆ. ಕರ್ನಾಟಕದಲ್ಲಿ ಯುವ ಕಾಂಗ್ರೆಸ್ ನಾಯಕರೊಬ್ಬರಂತೂ ರಾಹುಲ್ ಹೇಳಿದ ಹೇಳಿಕೆಯನ್ನು ತಾನು ಸಾವಿರ ಬಾರಿ ಪುನರುಚ್ಚರಿಸುತ್ತೇನೆ ಎಂದೆನ್ನುತ್ತಾ ''ಮೋದಿ ಹೆಸರಿರುವವರೆಲ್ಲರೂ ಕಳ್ಳರೇ ಆಗಿದ್ದಾರೆ'' ಎಂದು ಘೋಷಿಸಿದ್ದಾರೆ. ಇಷ್ಟೆಲ್ಲ ಮಾಡಿಯೂ, ಸಂವಿಧಾನಕ್ಕೇ ಅಪಚಾರವೆಸಗಿಯೂ ಅವರು 'ರಾಹುಲ್‌ಗೆ ಶಿಕ್ಷೆ ನೀಡುವ ಮೂಲಕ ಸಂವಿಧಾನಕ್ಕೆ ಅಪಚಾರವಾಗಿದೆ'' ಎಂದು ಹೇಳಿಕೊಳ್ಳುತ್ತಿದ್ದಾರೆ. ಎಂತಹ ವಿಪರ್ಯಾಸ! ಎಂತಹ ಮೂರ್ಖತನ!

## ಹಣ ಗಳಿಸುವ ಪರಿ

**ಯಾತ್ರಾಮಾತ್ರಪ್ರಸಿದ್ಧ್ಯರ್ಥಂ ಸ್ವೈಃ ಕರ್ಮಭಿರಗರ್ಹಿತೈಃ ।**
**ಅಕ್ಲೇಶೇನ ಶರೀರಸ್ಯ ಕುರ್ವೀತ ಧನಸಂಚಯಂ ॥ -ಮನುಸ್ಮೃತಿ**

ಮನುಷ್ಯನು ನಿತ್ಯಜೀವನವನ್ನು ನಡೆಸಲು ಸಾಕಾಗುವಷ್ಟು ಹಣವನ್ನು ನಿಂದನೀಯವಲ್ಲದ ಕೆಲಸಗಳಿಂದ ಶರೀರಕ್ಕೂ ಶ್ರಮವಾಗದಂತೆ ಸಂಗ್ರಹಿಸಬೇಕು- ಎಂಬುದು ಶ್ಲೋಕಾರ್ಥ.

ಇಂದಿನ ದಿನಗಳಲ್ಲಿ ಹಣಕ್ಕಿರುವ ಮಹತ್ವ ಇನ್ನಾವುದಕ್ಕೂ ಇಲ್ಲ. ಕಲಿಯುಗದಲ್ಲಿ ಹಣದ ಮಹಿಮೆ ವರ್ಣಿಸಲಸದಳ. ಆದ್ದರಿಂದ 'ಧನವಾನ್ ಬಲವಾನ್ ಲೋಕೇ ಸರ್ವಃ ಸರ್ವತ್ರ ಸರ್ವದಾ' ಎಂಬ ಉಕ್ತಿ ಪ್ರಸಿದ್ಧವಾಗಿದೆ. ಎಲ್ಲೆಲ್ಲಿಯೂ, ಯಾವಾಗಲೂ, ಎಲ್ಲವೂ ಅವನೇ ಸ್ಥಾನಮಾನ ಪಡೆಯುವುದರಿಂದ ಲೋಕದಲ್ಲಿ ಹಣವುಳ್ಳವನು ಬಲಿಷ್ಠ ಎಂಬುದು ಈ ಕಥನದ ಅರ್ಥ. ಪ್ರಭುಗಳ ಪ್ರಭುತ್ವಕ್ಕೂ ಹಣವೇ ಮೂಲ.




ಸಂಪತ್ತಿದ್ದರೆ ಅಪಾಯವೂ ತಪ್ಪದು. 'ಧನಂ ಮೈತ್ರೀಕರಂ ದಾನೇ ಆದಾನೇ ಶತ್ರುಕಾರಕಮ್' ಹಣವನ್ನು ಕೊಡುವಾಗ ಸ್ನೇಹ, ಪಡೆದುಕೊಳ್ಳುವಾಗ ಶತ್ರುತ್ವವುಂಟಾಗುತ್ತದೆ. ಹಣವೇ ಕೊಲೆಗೂ, ಸುಲಿಗೆಗೂ ಅತ್ಯಾಚಾರಕ್ಕೂ ಕಾರಣವೆನಿಸುತ್ತದೆ. ಧಾರಾಳವಾದ ಮನಸ್ಸು ಧನದ ಬೇಗೆಯಿಂದಾಗಿ ಬಳ್ಳಿಯಂತೆ ಬಾಡುತ್ತದೆ.

ಧರ್ಮಕ್ಕೆ ಧನವು ಆಶ್ರಯವಾಗುವುದೂ ಉಂಟು. ಎಷ್ಟೋ ಜನರು ತಾವು ಗಳಿಸಿದ ಸಂಪತ್ತಿನ ನಿರ್ದಿಷ್ಟ ಮೊತ್ತವನ್ನು ಧರ್ಮಕಾರ್ಯಕ್ಕೆ ವಿನಿಯೋಗಿಸುತ್ತಾರೆ. ಸೇವಾ ಕಾರ್ಯದಲ್ಲಿ ತೊಡಗಿಸಿ ದೀನದಲಿತರ ಬದುಕನ್ನು ಅರಳಿಸುವವರೂ ಇದ್ದಾರೆ. ಸಂಕಷ್ಟದಲ್ಲಿ ತೊಳಲಾಡುವವರಿಗೆ ನೀಡಿ ಉದಾತ್ತತೆಯನ್ನು ಮೆರೆದವರೂ ಇದ್ದಾರೆ.

ಸಂಪತ್ತಿರುವವರಲ್ಲಿ ಹೆಚ್ಚಿನವರು ಕೂಡಿಡುವುದರಲ್ಲಿಯೇ ತನ್ಮಯರಾಗುತ್ತಾರೆ. ಇಂಥವರ ಹಣ ಅತಿಯಾದ ವ್ಯಾಮೋಹದಿಂದ ತಾನೂ ತಿನ್ನದೇ ಇತರರಿಗೂ ನೀಡದೆ ಮೂರನೆಯವರ ಪಾಲಾಗುವುದೇ ಹೆಚ್ಚು. ಒಂದಿಷ್ಟು ಮಂದಿ ಪರರಿಗೆ ನೀಡುವ ಮೂಲಕ ಧನ್ಯತೆಯನ್ನು ಅನುಭವಿಸುತ್ತಾರೆ. ಹೆಚ್ಚಿನ ಜನರು ಅಧಿಕಾರ ಹಿಡಿಯುವುದಕ್ಕೆ, ದೌಲತ್ತನ್ನು ಮೆರೆಸುವುದಕ್ಕೆ ಬಳಸಿಕೊಳ್ಳುತ್ತಾರೆ. ಹೀಗೆ ಹಣದ ಮಹಿಮೆ ವಿಚಿತ್ರವೂ ಹೌದು. ವೈವಿಧ್ಯವೂ ಹೌದು. ಹಣವುಳ್ಳವರು ಹೆಚ್ಚಾಗಿ ಸ್ಪರ್ಧಿಗಳಾಗಿರುತ್ತಾರೆ.

ಹಣ ಗಳಿಸುವುದು ಪರಿಶ್ರಮದ ಫಲ. ಅದೊಂದು ಅದ್ಭುತ ಕಲೆ. ಎಲ್ಲರಿಂದಲೂ ಇದು ಸಾಧ್ಯವಾಗದು. ಸರಿಯಾದ ಶ್ರಮ ಹಾಗೂ ಮಾರ್ಗದಿಂದ ಗಳಿಸಿದ ಹಣಕ್ಕಿರುವ ಮರ್ಯಾದೆಯೇ ಬೇರೆ.

ಹಣವನ್ನಾಗಲೀ, ಆಸ್ತಿಪಾಸ್ತಿಗಳನ್ನಾಗಲೀ ಕೆಟ್ಟ ಮಾರ್ಗದಿಂದ ಅತಿಯಾಗಿ ಗಳಿಸಿ ಕೂಡಿಡುವುದರಿಂದ ಪ್ರಯೋಜನವೇನು? ಇಂತಹ ಕ್ರಮ ಕೇವಲ ಪಾಪವನ್ನು ಕೂಡಿಡುವ ಪ್ರಯತ್ನವಷ್ಟೇ ಆಗುತ್ತದೆ. ಹೀಗಿರುವಾಗ ನಾವು ಹಣ ಗಳಿಸುವಾಗ ಯೋಚಿಸುವುದು ಒಳ್ಳೆಯದು. ನಿತ್ಯ ಜೀವನವನ್ನು ಚೆನ್ನಾಗಿ ನಡೆಸಲು ಸಾಕಾಗುವಷ್ಟು ಗಳಿಸಿದರೆ ಸಾಕು. ಆ ಗಳಿಕೆಯೂ ನ್ಯಾಯ ಹಾಗೂ ಧರ್ಮ ಮಾರ್ಗವನ್ನಾಶ್ರಯಿಸಬೇಕು. ನಿಂದನೀಯವಲ್ಲದ ದೇಹಕ್ಕೂ ಅತಿಯಾದ ಶ್ರಮ, ಹಿಂಸೆ ಇತ್ಯಾದಿಯಾಗದ ರೀತಿಯಲ್ಲಿ ಗಳಿಸಲು ಪ್ರಯತ್ನಿಸಬೇಕು. ಮುಂದಿನ ತಲೆಮಾರಿಗೆ ಕೂಡಿಡುವುದರಲ್ಲಿ ಯಾವ ಪುರುಷಾರ್ಥವೂ ಅಡಗಿಲ್ಲ. ಅದರಿಂದೇನೂ ನಮಗೆ ಪ್ರಯೋಜನವಿಲ್ಲ. ಹಣ ಗಳಿಸುವುದು ಮುಖ್ಯವಾದರೂ ಅದೇ ಮುಖ್ಯವಲ್ಲ. ಹಣವು ಧರ್ಮದ ಮೂಲವನ್ನು ಆಶ್ರಯಿಸಬೇಕಾದುದು ಮುಖ್ಯ.

ಇಂತಹ ಅಪರೂಪದ ತಳಿಯ ಒಂದೇ ಒಂದು ಗೋವು ಭಾರತದಲ್ಲಿ ದುರ್ಬಿನ್ ಹಾಕಿಕೊಂಡು ಹುಡುಕಿದರೂ ಸಿಗುವುದಿಲ್ಲ ಎನ್ನುವುದೇ ವಿಪರ್ಯಾಸ.

# ಬ್ರಾಹ್ಮನ್: ವಿಶ್ವದಲ್ಲೇ ಪ್ರಸಿದ್ಧ ಹಾಗೂ ರೋಗ ನಿರೋಧಕ ಗೋತಳಿ




ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com

ಅಮೆರಿಕದಲ್ಲಿ ದನಗಳ ಸುಧಾರಣೆಯ ಕಾರ್ಯದಲ್ಲಿ ಬ್ರಾಹ್ಮನ್ ದನಗಳು ಅದ್ವಿತೀಯ ಸ್ಥಾನ ಗಳಿಸಿಕೊಂಡಿವೆ. ಪರೋಪಜೀವಿಗಳಿಂದ ರಕ್ಷಿಸಿಕೊಳ್ಳಬಲ್ಲ ಈ ತಳಿಗಳು ಪ್ರಬಲ ರೋಗ ಪ್ರತಿಬಂಧಕ ಶಕ್ತಿಯನ್ನು ಹೊಂದಿವೆ. ಆಕಳುಗಳು ಉತ್ತಮ ತಾಯಿಯಾಗಿ ಕರುಗಳನ್ನು ಅಕ್ಕರೆಯಿಂದ ಸಲಹುತ್ತವೆ ಮತ್ತು ಅಲ್ಪ ಪ್ರಮಾಣದ ಹಾಲನ್ನು ಸಹ ನೀಡುತ್ತವೆ. ಅಲ್ಲಿನ ವಾತಾವರಣವು ದನಗಳಿಗೆ ಹಾಲು ಹಿಂಡಲು ಪ್ರತಿಕೂಲವಾಗಿದ್ದರೂ ಬ್ರಾಹ್ಮನ್ ದನಗಳಿಗೆ ಅದರಿಂದ ಯಾವ ತೊಂದರೆಯೂ ಆಗದೇ ಇರುವುದು ಕಂಡುಬಂದಿದೆ. ಹಾಗೆಯೇ ಬೇಗನೆ ಪ್ರತಿಕೂಲ ಸನ್ನಿವೇಶಗಳಿಗೆ ಮತ್ತು ಪರಿಸರಕ್ಕೆ ಹೊಂದಿಕೊಂಡು ಹೋಗುವ ವೈಶಿಷ್ಟ್ಯ ಈ ದನಗಳದ್ದು. ಮತ್ತೊಂದು ವಿಶೇಷವೆಂದರೆ ಈ ದನಗಳಲ್ಲಿ ಈವರೆಗೂ ಕಣ್ಣಿನ ಕ್ಯಾನ್ಸರ್ ಕಂಡುಬಂದಿಲ್ಲ. ಈ ದನಗಳ ಆಕಾರ ಮತ್ತು ತಿಂದ ಹುಲ್ಲನ್ನು ಮಾಂಸವನ್ನಾಗಿ ಪರಿವರ್ತಿಸುವ ಶಕ್ತಿ ಅದ್ಭುತವಾಗಿದೆ ಎಂಬುದಾಗಿ ವಿದೇಶಗಳಲ್ಲಿನ ಪಶುಪಾಲಕರು ಅಭಿಪ್ರಾಯಿಸಿದ್ದಾರೆ. ಇವುಗಳು ಬಿಸಿಲಿನಲ್ಲಿ ಆಯಾಸವಿಲ್ಲದೆ ಬಹಳ ಕಾಲದವರೆಗೂ ಮೇಯಬಲ್ಲವು ಮತ್ತು ನಿರಾಯಾಸವಾಗಿ ಬಹುದೂರ ಮೇಯುತ್ತಾ ತಿರುಗಾಡಬಲ್ಲವು. ಇವು ತಂಪಾದ ನೆರಳಿನಲ್ಲಿ ಮಲಗಿ ಕಳೆಯುವ ಕಾಲ ಕಡಿಮೆ. ಇಂದು ಈ ಜಾತಿಯ ದನಗಳು ಅಮೆರಿಕಾ ಕರಾವಳಿ ಪ್ರದೇಶಗಳಿಂದ ಸಾವಿರಾರು ಮೈಲಿಯೊಳಗಿನ ಪ್ರದೇಶಗಳವರೆಗೂ ಬೆಳೆದು ಹಬ್ಬಿಕೊಂಡಿರುವುದು ಕಂಡುಬರುತ್ತದೆ. ಹೀಗಾಗಿ ಇವುಗಳನ್ನು ಇಂದು ಕ್ಯಾಲಿಫೋರ್ನಿಯಾ, ನೀವೇದ, ಮಾಂಟೇನ್, ಕಾನ್ಸಸ್, ಓಕ್‌ಲಾಮ ಮತ್ತು ಅರ್‌ಕನ್ಸಾಸ್ ಪ್ರದೇಶಗಳಲ್ಲಿ ಬೆಳೆಸಿ ಅಭಿವೃದ್ಧಿಗೊಳಿಸಲಾಗಿದೆ. ಇದನ್ನು ಯುರೋಪಿನ ಬಾಸ್ ಟಾರಸ್ ಗುಂಪಿನ ಮಾಂಸದ ತಳಿಗಳೊಂದಿಗೆ ಸಂಕರಿಸಿ ಇನ್ನಷ್ಟು ಅಭಿವೃದ್ಧಿಪಡಿಸಲಾಗುತ್ತಿದೆ. ಅಮೆರಿಕಾದಲ್ಲಿ ಮಾಂಸಕ್ಕಾಗಿ ಹೆಸರಾದ ಬ್ರಾಂಗಸ್, ಬೀಫ್‌ಮಾಸ್ಟರ್, ಸಿಂಬ್ರಾ ಮತ್ತು ಸಾಂಟಾ ಗೆಟ್ರುಡಿಸ್ ಎಂಬ ಮಾಂಸದ ತಳಿಗಳಿಂದ ಇದನ್ನು ವ್ಯಾಪಕವಾಗಿ ಸಂಕರಿಸಲಾಗಿದೆ. ಇನ್ನಷ್ಟು ಈ ತಳಿಯನ್ನು ಅಭಿವೃದ್ಧಿಪಡಿಸುವ ಕಾರ್ಯ ಸಾಗುತ್ತಿದೆ. ಇವುಗಳ ಮಾಂಸ ರುಚಿಯಾಗಿರುವುದರಿಂದ ಬೇರೆಲ್ಲಾ ತಳಿಗಳಿಗಿಂತ ಹೆಚ್ಚು ಜನಪ್ರಿಯತೆಯನ್ನು ಪಡೆದಿದೆ ಎಂದೇ ಹೇಳಲಾಗುತ್ತಿದೆ.

1923ರಲ್ಲಿ ಬ್ರೆಝಿಲ್ ದೇಶದಿಂದ ಅಮೆರಿಕಾ ತನ್ನಲ್ಲಿನ ಟೆಕ್ಸಾಸಿಗೆ ಸಾಕಷ್ಟು ಗೀರ್ ಮತ್ತು ಓಂಗೋಲ್ ದನಗಳನ್ನು ತರಿಸಿಕೊಂಡಿತ್ತು. ಪುನಃ 1925ರಲ್ಲಿ 120 ಹೋರಿ ಮತ್ತು 18 ಆಕಳುಗಳನ್ನು ಆಮದು ಮಾಡಿಕೊಂಡಿತು. ಈ ದನಗಳ ಹಿಂಡನ್ನು ದೊಡ್ಡ ಸಂಖ್ಯೆಯಲ್ಲಿ ಬೆಳೆಸಿ ಸಾಕಿಕೊಂಡು ಬಂದ ದೊಡ್ಡ ಪಶುಪಾಲಕರೆಂದರೆ, ಟೆಕ್ಸಾಸ್‌ನ ಸ್ಪಾರ್ಟವೆಲಾ ಬ್ರದರ್ಸ್, ಕಾರಿಸಿನಾದ ಬರ್ಕ್ ಬ್ರದರ್ಸ್, ಪೀಯರ್ಸ್ ರಾಜ್ ಪೀಯರ್ಸ್ ಆಫ್ ಟೆಕ್ಸಾಸ್ ಹಾಗೂ ಟೆಕ್ಸಾಸ್‌ದ ಸಿ.ಕೆ. ಬ್ಯಾಯಟ್ ಡೇವರ್ಸ್ ಮೊದಲಾದವರು ಎಂದು ಹೇಳಲಾಗಿದೆ. ಇವರುಗಳ ಮುಖ್ಯ ಕಚೇರಿ ಟೆಕ್ಸಾಸ್‌ನ ಆನ್‌ಟೋನಿಯಾ ಎಂಬಲ್ಲಿ ಸ್ಥಾಪಿಸಲಾಗಿದೆ. ಈ ದನಗಳನ್ನು ಅಧಿಕ ಸಂಖ್ಯೆಯಲ್ಲಿ ಟೆಕ್ಸಾಸ್, ಫ್ಲೋರಿಡಾ, ಲ್ಯೂಸಿನಾ, ಜಾರ್ಜಿಯಾ ಮತ್ತು ಕ್ಯಾಲಿಫೋರ್ನಿಯಾದಲ್ಲಿ ಸಾಕಿಕೊಂಡಿರುವುದು ಕಂಡುಬರುತ್ತದೆ. ಇಲ್ಲಿಯ ಪಶುಪಾಲಕರು ಹೆಚ್ಚಿನ ವೈಜ್ಞಾನಿಕ ಪರೀಕ್ಷೆ, ಸಂಶೋಧನೆಯ ಕಾರ್ಯಗಳನ್ನು ಕೈಗೊಂಡು ಪಶು ಸಂಪತ್ತನ್ನು ಹೆಚ್ಚಿಸಿಕೊಂಡು ಇಂದು ಹೈನು ಉತ್ಪಾದನೆ ಮತ್ತು ಮಾಂಸ ಉತ್ಪಾದನೆಯಲ್ಲಿ ಜಗತ್ತಿನಲ್ಲಿಯೇ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಹಾಗೆಯೇ ಅಮೆರಿಕಾದ ಆಂಗಸ್ ದನದೊಂದಿಗೆ ಇವುಗಳನ್ನು ಸಂಕರಣಗೊಳಿಸಿ ಹೊಸದಾದ ಬ್ರಾಂಗಸ್ ಎಂಬ ತಳಿಯನ್ನು ಅಭಿವೃದ್ಧಿ ಪಡಿಸಲಾಗಿದೆ. ಇದೇ ತಳಿಯನ್ನು ಜಮೈಕಾದ ಸ್ಥಳೀಯ ತಳಿಯೊಂದಿಗೆ ಸಂಕರಣಗೊಳಿಸಿ ಅದಕ್ಕೆ ಜಮೈಕಾ ಹೋಪ್ ಬ್ರೀಡ್ ಎಂಬ ಹೆಸರನ್ನಿಡಲಾಗಿದೆ. ಕ್ಯೂಬಾ, ವೆನಿಝೂಲಾ ಮತ್ತು ಮೆಕ್ಸಿಕೋ ದೇಶಗಳು ಸಹಾ ಇದನ್ನೇ ಅನುಸರಿಸುತ್ತಿವೆ.

ಬ್ರೆಝಿಲ್ ಮತ್ತು ಆಸ್ಟ್ರೇಲಿಯಾದಲ್ಲಿ ಈ ಎಲ್ಲಾ ತಳಿಗಳನ್ನು, ಅದರಲ್ಲಿಯೂ ಬ್ರಾಹ್ಮನ್ ತಳಿಗಳನ್ನು ಅಲ್ಲಿಯ ದನಗಳೊಂದಿಗೆ ಸಂಕರಣ ಮಾಡಿ, ಆ ಸಂಕರಣ ತಳಿಗಳಿಗಾಗಿ ಬ್ರಾಹ್ಮನ್ ಬ್ರೀಡರ್ಸ್ ಅಸೋಸಿಯೇಷನ್ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಇದರಲ್ಲಿಯ ಬಹುತೇಕ ಸದಸ್ಯರು ಜಾನುವಾರುಗಳನ್ನು ಗೋಮಾಂಸ ಮಾರುಕಟ್ಟೆಗೆ ಸರಬರಾಜು ಮಾಡುವವರಾಗಿರುವುದು ವಿಪರ್ಯಾಸ. ಹಾಗೆಯೇ ಈ ತಳಿಗಳು ಆಸ್ಟ್ರೇಲಿಯಾದ ಗೋಮಾಂಸದ ಮಾರುಕಟ್ಟೆಯಲ್ಲಿ ಅದರಲ್ಲೂ ವಿಶೇಷವಾಗಿ ಆಸ್ಟ್ರೇಲಿಯಾದ ಉತ್ತರ ಭಾಗಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುವುದು ದುರದೃಷ್ಟಕರ. ಆಸ್ಟ್ರೇಲಿಯಾದಲ್ಲಿ ಈ ತಳಿಯನ್ನು ಪರಿಚಯಿಸಿದಾಗಿನಿಂದ ಆಸ್ಟ್ರೇಲಿಯಾದ ಶೇಕಡಾ 50ಕ್ಕೂ ಹೆಚ್ಚು ಜಾನುವಾರುಗಳು ಇದೇ ತಳಿಗಳಾಗಿವೆ ಇಲ್ಲವೇ ಇದರಿಂದ ಸಂಕರಣಗೊಂಡ



ಇತರೆ ತಳಿಗಳಾಗಿವೆ. ಇದು ಆಸ್ಟ್ರೇಲಿಯಾದ ಉಷ್ಣ ವಲಯವಲ್ಲದೇ ಶೀತ ವಲಯದಲ್ಲೂ ಬೆಳೆಯುವ ಸಾಮರ್ಥ್ಯವನ್ನು ಹೊಂದಿರುವುದು ದೃಢಪಟ್ಟಿದೆ. ಹೀಗಾಗಿ ಇದನ್ನು ಕೆಲವೆಡೆ ನಿರಂತರ ಮಂಜು ಬೀಳುವ ಅತಿ ಶೀತ ಪ್ರದೇಶದಲ್ಲೂ ಸಾಕಲಾಗುತ್ತಿದೆ. ಅತಿ ಶೀತ ವಲಯವಾದ ಮತ್ತು ಹಿಮ ಬೀಳುವ ಪ್ರದೇಶಗಳಾದ ಇಲ್ಲಿಯ ಸೆಂಟ್ರಲ್ ವಿಕ್ಟೋರಿಯಾದ ಕೈನೆಟನ್‌ನಂತಹ ಪ್ರದೇಶಗಳಲ್ಲೂ ಈ ತಳಿಯನ್ನು ಹೆಚ್ಚಾಗಿ ಇಲ್ಲಿಯ ತಳಿಗಾರರು ಪೋಷಿಸುತ್ತಿರುವುದು ಕಂಡುಬರುತ್ತದೆ. ಈ ತಳಿಯ ತಳಿಗಾರರು ವಿಕ್ಟೋರಿಯಾದ ಉತ್ತರ ಕ್ವೀನ್ಸ್‌ಲ್ಯಾಂಡ್‌ವರೆಗೂ ವಿಸ್ತರಿಸಿಕೊಂಡಿರುವುದು ಇದರ ಪ್ರಾಮುಖ್ಯತೆಗೆ ಸಾಕ್ಷಿಯಾಗಿದೆ. ಇದೇ ರೀತಿಯ ಬ್ರಾಹ್ಮನ್ ತಳಿಯ ಬ್ರೀಡರ್ಸ್ ಅಸೋಸಿಯೇಷನ್ ಸಂಸ್ಥೆಗಳು ಮೆಕ್ಸಿಕೋ, ಕ್ಯೂಬಾ ಮುಂತಾದ ದೇಶಗಳಲ್ಲಿಯೂ ಕಂಡು ಬರುತ್ತಿರುವುದು ಈ ತಳಿಯ ಹೆಗ್ಗಳಿಕೆಗೆ ಹಿಡಿದ ಕನ್ನಡಿಯಾಗಿದೆ.

ಬ್ರಾಹ್ಮನ್ ದನಗಳ ಮೂಲ ದನಗಳು ಭಾರತದಲ್ಲಿ ನೂರಾರು ವರ್ಷಗಳಿಂದ ಉಷ್ಣ ವಲಯದಲ್ಲಿಯೇ ಹುಟ್ಟಿ ಬಾಳಿ ಬೆಳೆದುಕೊಂಡು ಬಂದಿರುವುದರಿಂದ ಇವು ಸ್ವಾಭಾವಿಕವಾಗಿ ಇಲ್ಲಿಯ ಬಿಸಿಲಿನ ತಾಪವನ್ನು ಮತ್ತು ಆರ್ದ್ರತೆಯನ್ನು ತಡೆದುಕೊಳ್ಳುವ ಒಂದು ವಿಶೇಷ ಶಕ್ತಿಯನ್ನು ಹೊಂದಿವೆ. ಹಾಗೆಯೇ ಈ ದನಗಳ ಮೈಮೇಲಿನ ಬೆವರಿನ ಗ್ರಂಥಿಗಳು ಸಮೃದ್ಧಿಯಾಗಿ ಚೆನ್ನಾಗಿ ಬೆಳೆದುಕೊಂಡಿರುವುದರಿಂದ ಅವು ಸಾಕಷ್ಟು ಶಾಖವನ್ನು ಬೆವರಿನ ಮೂಲಕ ಹೊರಗೆ ಹಾಕುತ್ತವೆ. ಇದು ಯುರೋಪ್‌ನ ಬಾಸ್ ಟಾರಸ್ ಜಾತಿಯ ದನಗಳಲ್ಲಿ ಅಷ್ಟು ಸಮರ್ಪಕವಾಗಿ ಕಂಡು ಬರುವುದಿಲ್ಲ. ಇಷ್ಟೇ ಅಲ್ಲದೇ ಈ ದನಗಳ ಚರ್ಮದಲ್ಲಿರುವ ಸಬೇಸಿಯಸ್ ಗ್ರಂಥಿಗಳು ಒಂದು ರೀತಿಯ ವಾಸನೆಯಿಂದ ಕೂಡಿದ ಎಣ್ಣೆಯಂತೆ ಜಿಡ್ಡಾಗಿರುವ ವಸ್ತುವನ್ನು ಸ್ರವಿಸುತ್ತವೆ. ಇದರ ವಾಸನೆಯನ್ನು ನೊಣಗಳು ಸಹಿಸಲಾರದೆ ಹತ್ತಿರ ಸುಳಿಯದೆ ಇರುವುದು ಸ್ಪಷ್ಟವಾಗಿದೆ. ಇವುಗಳಲ್ಲಿ ಕಂಡುಬರುವ ಇನ್ನೊಂದು ವಿಶೇಷ ಗುಣವೇನೆಂದರೆ, ಇವುಗಳು ಹುಲ್ಲುಗಾವಲುಗಳಲ್ಲಿ ಮೇಯುವಾಗ ಕ್ರಿಮಿ ಕೀಟಗಳು ಇವುಗಳ ಮೈಮೇಲೆ ಕುಳಿತು ಕಡಿಯಲು ಪ್ರಾರಂಭಿಸಿದ ಕೂಡಲೇ ಅದರ ಕಾಟವನ್ನು ತಾಳಲಾರದೆ ಇವುಗಳು ತಮ್ಮ ಚರ್ಮವನ್ನು ಜೋರಾಗಿ ನಡುಗಿಸುತ್ತವೆ. ಹೀಗೆ ಇವುಗಳು ತಮ್ಮ ಮೈಯನ್ನು ನಿರಂತರವಾಗಿ ಕಂಪಿಸುವ ಪರಿಣಾಮ ಈ ದನಗಳ ಶರೀರದ ಚರ್ಮದ ಹೊದಿಕೆ ಮತ್ತು ಕೊಬ್ಬುಗಳ ನಡುವೆ ಒಂದು ರೀತಿಯ ತೆಳುವಾದ ಮತ್ತು ಸೂಕ್ಷ್ಮವಾದ ಸ್ನಾಯು ಪೊರೆಯು ಬೆಳೆದುಕೊಂಡು ಬಂದಿದೆ. ಇದನ್ನು ವೈಜ್ಞಾನಿಕ ಭಾಷೆಯಲ್ಲಿ ಪೆನ್ನಿಕ್ಯೂಲರ್ ಮೆಂಬ್ರೇನ್ ಎಂದು ಕರೆಲಾಗುತ್ತದೆ.

ಸಾಮಾನ್ಯವಾಗಿ ಈ ತಳಿಯ ಆಕಳುಗಳು 200 ರಿಂದ 300 ಕೆ.ಜಿ. ಮತ್ತು ಹೋರಿಗಳು 450 ರಿಂದ 550 ಕೆ.ಜಿ. ತೂಗುತ್ತವೆ. ಇವುಗಳ ಕೊಂಬುಗಳು ಒರಟಾಗಿದ್ದು, ಉದ್ದ ಮತ್ತು ಅಗಲವಾಗಿ ಹೊರಭಾಗಕ್ಕೆ ಚಾಚಿಕೊಂಡಿರುತ್ತವೆ. ಬಣ್ಣದಲ್ಲಿ ಆಕಳುಗಳು ಹೆಚ್ಚಾಗಿ ಬಿಳಿ, ಕಂದು ಮತ್ತು ಕೆಂಪು ಬಣ್ಣದಿಂದ ಕೂಡಿದ್ದರೆ, ಹೋರಿಗಳು ಹೆಚ್ಚಾಗಿ ಗೋಧಿ ಬಣ್ಣದಿಂದ ಕೂಡಿದ್ದು ಮೈತುಂಬಾ ಚುಕ್ಕೆಗಳನ್ನು ಹೊಂದಿರುವುದು ಸಾಮಾನ್ಯವಾಗಿದೆ. ಶರೀರ ಉದ್ದವಾಗಿದ್ದು, ಅಗಲ ಕಡಿಮೆ ಇರುತ್ತದೆ. ಕಾಲುಗಳು ಉದ್ದವಾಗಿದ್ದು, ಮೈಚರ್ಮ ಸಡಿಲವಾಗಿ, ಗಂಗೆದೊಗಲು ಬಹಲ ಉದ್ದವಾಗಿದ್ದು ಜೋತಾಡುತ್ತಿರುತ್ತದೆ. ಇವುಗಳು ಬೆವರುವ ಪ್ರವೃತ್ತಿ ಹೊಂದಿದ್ದು ಯಥೇಚ್ಛ ಮಾಂಸ ಖಂಡಗಳಿಂದ ತುಂಬಿಕೊಂಡಿರುತ್ತವೆ. ಕರುಗಳು ಹುಟ್ಟಿದಾಗ 20 ರಿಂದ 30 ಕೆ.ಜಿ.ಗಳಿಷ್ಟಿದ್ದು ತೀವ್ರ ಗತಿಯಲ್ಲಿ ಬೆಳೆಯುತ್ತವೆ. ಇವುಗಳು 15 ವರ್ಷ ವಯಸ್ಸಾದಾಗಲೂ ಕರು ಹಾಕಿರುವ ಪ್ರಸಂಗಗಳು ಸಾಕಷ್ಟಿವೆ. ತಮ್ಮ ಜೀವಿತಾವಧಿಯಲ್ಲಿ ಸುಮಾರು 15ಕ್ಕೂ ಹೆಚ್ಚು ಕರು ಹಾಕುವ ಸಾಮರ್ಥ್ಯ ಇವುಗಳಿಗಿರುವುದು ದೃಢಪಟ್ಟಿದೆ.

ಓಮನ್ ಹಾಗೂ ಫುಜೈರಃ ದೇಶಗಳಲ್ಲಿ ಬ್ರಾಹ್ಮನ್ ಹೋರಿಗಳನ್ನು ಅವರ ಸಾಂಪ್ರದಾಯಿಕ ಕ್ರೀಡೆಯಾದ ಗೂಳಿ ಕಾಳಗಕ್ಕೆ ಹೆಚ್ಚಾಗಿ ಬಳಸಿಕೊಳ್ಳಲಾಗುತ್ತಿದೆ. ಹೀಗೆ ಕಾಳಗಕ್ಕೆ ಬಳಸುವ ಈ ಹೋರಿಗಳ ಆಹಾರ ಪದ್ಧತಿಯಲ್ಲಿ ತೀವ್ರ ನಿಗಾ ವಹಿಸಲಾಗುತ್ತದೆ. ಎಷ್ಟರಮಟ್ಟಿಗೆ ಎಂದರೆ ಕಾಳಗಕ್ಕೆ ಬೇಕಾದ ಶಕ್ತಿಗಾಗಿ ಇವುಗಳಿಗೆ ಜೇನು ಹಾಗೂ ಹಾಲನ್ನು ನೀಡಿ ಪೋಷಿಸಲಾಗುತ್ತದೆ. ಹೀಗೆ ದೇಶ ವಿದೇಶಗಳಲ್ಲಿ ಒಂದಲ್ಲ ಒಂದು ರೀತಿ ಹೆಸರುವಾಸಿಯಾಗಿರುವ ಇಂತಹ ಅಪರೂಪದ ತಳಿಯ ಒಂದೇ ಒಂದು ಗೋವು ಭಾರತದಲ್ಲಿ ದುರ್ಬಿನ್ ಹಾಕಿಕೊಂಡು ಹುಡುಕಿದ್ದರೂ ಸಿಗುವುದಿಲ್ಲ ಎನ್ನುವುದೇ ವಿಪರ್ಯಾಸ.

# ರಾಜ್ಯ ಚುನಾವಣೆ: ರಾಜಕೀಯ ಪಕ್ಷಗಳ ಉಚಿತ ಕೊಡುಗೆಗಳ 'ಭಾರ'

■ ಎಂ.ಜಿ. ಚಂದ್ರಕಾಂತ್

ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆ ಹತ್ತಿರ ಬರುತ್ತಿದೆ. ರಾಜ್ಯದ ಆರ್ಥಿಕ ಆರೋಗ್ಯದ ಮೇಲೆ ರಾಜಕೀಯ ಪಕ್ಷಗಳ ಚುನಾವಣಾ ಆಶ್ವಾಸನೆಗಳ ವೆಚ್ಚಗಳು ನಿರ್ಣಾಯಕ ಮತ್ತು ಪ್ರಮುಖವಾಗಿವೆ. ಒಬ್ಬ ಸರಾಸರಿ ಮತದಾರನಿಗೆ ಸಾರ್ವಜನಿಕ ಸಾಲ, ಹಣಕಾಸಿನ ಕೊರತೆಯ ಬಗ್ಗೆ ಸಾಕಷ್ಟು ಜ್ಞಾನವಿಲ್ಲದಿರಬಹುದು. ಆದರೆ ಐಎಂಎಫ್‌ನಿಂದ ಸಂಭಾವ್ಯ ಹಸ್ತಕ್ಷೇಪದ ಹೊರತಾಗಿಯೂ ನೆರೆಯ ರಾಷ್ಟ್ರಗಳಾದ ಶ್ರೀಲಂಕಾ/ ಪಾಕಿಸ್ತಾನ ಎದುರಿಸುತ್ತಿರುವ ಸಂಕಷ್ಟ ಕಂಡಾಗ ಚುನಾವಣಾ ಆಶ್ವಾಸನೆಗಳ ಸಂಭಾವ್ಯ ಪರಿಣಾಮಗಳನ್ನು ವಿಶ್ಲೇಷಿಸುವ ಅಗತ್ಯವಿದೆ. ರಾಜ್ಯದ ಆರ್ಥಿಕ ಆರೋಗ್ಯಕ್ಕೆ ಆರ್ಥಿಕ ಶಿಸ್ತು ನಿರ್ಣಾಯಕವಾಗಿದೆ. ಆದ್ದರಿಂದ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಕಾಯಿದೆ, 2002 (ಕೆಎಫ್‌ಆರ್‌ಎ) ಪ್ರಕಾರ ವಿತ್ತೀಯ ಕೊರತೆಯು GSDPಯ ಶೇ. 3ಕ್ಕಿಂತ ಹೆಚ್ಚಿರಬಾರದು. ಪಕ್ಷಗಳ ಉಚಿತ ಯೋಜನೆಗಳು ಆರ್ಥಿಕ ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ವಿಶ್ಲೇಷಿಸುವುದು ಬಹಳ ಮುಖ್ಯ. ಕರ್ನಾಟಕದ ಆರ್ಥಿಕ ಆರೋಗ್ಯದ ಮೇಲೆ ವಿವಿಧ ರಾಜಕೀಯ ಪಕ್ಷಗಳು ನೀಡುವ ಪ್ರಮುಖ ಉಚಿತ ಕೊಡುಗೆಗಳ ಪ್ರಭಾವವನ್ನು ವಿಶ್ಲೇಷಿಸುವ ಸಾಧಾರಣ ಪ್ರಯತ್ನ ಇಲ್ಲಿದೆ.

**ಕಾಂಗ್ರೆಸ್‌ನ ಉಚಿತ ಯೋಜನೆಗಳು:** ಕಾಂಗ್ರೆಸ್ ಪಕ್ಷವು ಪ್ರತಿ ಮನೆಗೆ ತಿಂಗಳಿಗೆ 200 ಯುನಿಟ್ ಉಚಿತ ವಿದ್ಯುತ್‌ನ ಆಶ್ವಾಸನೆ ನೀಡಿದೆ. ಕರ್ನಾಟಕದಲ್ಲಿ 1.79 ಕೋಟಿ ಕುಟುಂಬಗಳು ಇವೆ. ಇದರಿಂದ ಪ್ರತಿ ತಿಂಗಳಿಗೆ ಪ್ರತಿ ಮನೆಗೆ ರೂ. 1202.50 ಆಗಿ, ವರ್ಷಕ್ಕೆ ರೂ. 14,430 ಆಗಿ, ಒಟ್ಟು ರೂ. 25830 ಕೋಟಿಗಳ ವಿದ್ಯುತ್ ಬಿಲ್ ಆಗುತ್ತದೆ.

ಕರ್ನಾಟಕದ 2023-24ರ GSDP 23.33 ಲಕ್ಷ ಕೋಟಿ ಆಗಿದ್ದು, 2023-24ರ ಪ್ರಸ್ತುತ ವಿತ್ತೀಯ ಕೊರತೆ ರೂ. 60,531 ಅಡಿ ಆಗಿದೆ. ಒಟ್ಟಾರೆ ಗೃಹಜ್ಯೋತಿ ಯೋಜನೆಯಿಂದ ಒಟ್ಟು ಹಣಕಾಸಿನ ಹೊರೆಯು ರೂ. 25830 ಕೋಟಿಗಳು ಆಗಿರುತ್ತವೆ. ಇದಲ್ಲದೆ, ಈ ಉಚಿತ ವಿದ್ಯುತ್ ಈಗಾಗಲೇ ರೈತರಿಗೆ ನೀಡುತ್ತಿರುವ ರೂ. 13,000 ಕೋಟಿ ಉಚಿತ ವಿದ್ಯುತ್ ಪೂರೈಕೆಯ ವೆಚ್ಚದ ದುಪ್ಪಟ್ಟು ಆಗುತ್ತದೆ.

ಕಾಂಗ್ರೆಸ್‌ನ ಎರಡನೇ ಪ್ರಮುಖ ಆಶ್ವಾಸನೆ ಗೃಹಲಕ್ಷ್ಮಿ ಯೋಜನೆ. ಇದರ ಪ್ರಕಾರ ಎಲ್ಲಾ ಬಿಪಿಎಲ್ ಕುಟುಂಬದ ಮಹಿಳಾ ಮುಖ್ಯಸ್ಥರಿಗೆ ತಿಂಗಳಿಗೆ ರೂ. 2000 ಅನುದಾನ ನೀಡುವುದು. ಪ್ರಸ್ತುತ ರಾಜ್ಯದಲ್ಲಿ 1.28 ಕೋಟಿ ಬಿಪಿಎಲ್ ಕುಟುಂಬಗಳಿವೆ ಮತ್ತು ಪ್ರತಿ ಬಿಪಿಎಲ್ ಮಹಿಳೆ ಕುಟುಂಬದ ಮುಖ್ಯಸ್ಥರಿಗೆ ತಿಂಗಳಿಗೆ ರೂ. 2000 ನೀಡುವುದರಿಂದ ವಾರ್ಷಿಕ ರೂ. 30,720 ಕೋಟಿಗಳ ಖರ್ಚು ಬೀಳುತ್ತದೆ.

**ಆಮ್ ಆದ್ಮಿ ಪಕ್ಷದ ಉಚಿತ ಯೋಜನೆಗಳು:** ಆಮ್ ಆದ್ಮಿ ಪಕ್ಷದಿಂದ ತಿಂಗಳಿಗೆ ಉಚಿತ ವಿದ್ಯುತ್, ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿನಲ್ಲಿ ಖರೀದಿ, ಕೃಷಿ ಸಾಲ ಮನ್ನಾ, ನಿರುದ್ಯೋಗ ವಿಮೆ ರೂ. 3000, ಪ್ರತಿ ಮನೆಗೆ ತಿಂಗಳಿಗೆ 2000 ಲೀಟರ್ ವರೆಗೆ ಉಚಿತ ನೀರು, ನಗರ ಪ್ರದೇಶದ ಮಹಿಳೆಯರಿಗೆ ಉಚಿತ ಬಸ್ ಪಾಸ್ ಇತ್ಯಾದಿ ಸೇರಿವೆ. ಇವುಗಳಲ್ಲಿ ರೈತರ ಸಾಲ ಮನ್ನಾ ಹಾಗೂ ಪ್ರತಿ ಮನೆಗೆ ತಿಂಗಳಿಗೆ 200 ಯೂನಿಟ್‌ಗಳ ಉಚಿತ ವಿದ್ಯುತ್ ಪ್ರಮುಖ ಉಚಿತ ಯೋಜನೆಗಳಾಗಿ, ಸಾಲ ಮನ್ನಾಕ್ಕಾಗಿ ರೂ 36201 ಕೋಟಿ ಉಚಿತ ಮತ್ತು ಮನೆಗಳಿಗೆ ತಿಂಗಳಿಗೆ 200 ಯೂನಿಟ್‌ಗಳ ಉಚಿತ ವಿದ್ಯುತ್ ವನ್ನು ಒದಗಿಸುವ ವೆಚ್ಚ ರೂ. 25830 ಕೋಟಿ ಆಗಿದ್ದು ಒಟ್ಟು ರೂ. 62301 ಕೋಟಿ ಆಗಲಿವೆ.

**ಬಿಜೆಪಿ ಉಚಿತಗಳು:** ಕರ್ನಾಟಕ 2024ರ ಬಜೆಟ್‌ನಲ್ಲಿ ಬಿಜೆಪಿ ಸರ್ಕಾರವು ಗೃಹಿಣಿ ಶಕ್ತಿ ಯೋಜನೆಯಡಿಯಲ್ಲಿ ಪ್ರತಿ ಭೂರಹಿತ ಮಹಿಳಾ ಕೃಷಿ ಕೆಲಸಗಾರರಿಗೆ ತಿಂಗಳಿಗೆ ರೂ.1000 ಘೋಷಿಸಿತು. ಕರ್ನಾಟಕವು 77,58,600 ಗ್ರಾಮೀಣ ಕುಟುಂಬಗಳನ್ನು ಹೊಂದಿದೆ ಮತ್ತು ಶೇ. 8.4ರಷ್ಟು ಗ್ರಾಮೀಣ ಕುಟುಂಬಗಳು ಭೂರಹಿತವಾಗಿವೆ. ಆದ್ದರಿಂದ 6,51,722 ಭೂರಹಿತ ಗ್ರಾಮೀಣ ಕುಟುಂಬಗಳಿಗೆ, ಪ್ರತಿ ಕುಟುಂಬಕ್ಕೆ ಒಬ್ಬ ಮಹಿಳಾ ಕೃಷಿ ಕೆಲಸಗಾರರಂತೆ ವರ್ಷಕ್ಕೆ ರೂ. 12000ವಾಗಿ ಒಟ್ಟು ರೂ. 782 ಕೋಟಿ ವೆಚ್ಚವಾಗುತ್ತದೆ. ಹಾಗೂ ಸಂಘಟಿತ ವಲಯದಲ್ಲಿ ಕೆಲಸ ಮಾಡುವ 30 ಲಕ್ಷ ಮಹಿಳೆಯರಿಗೆ ಉಚಿತ ಬಸ್ ಪಾಸ್‌ಗಾಗಿ ರೂ. 1,000 ಕೋಟಿ ಮತ್ತು ಶಾಲಾ ಕಾಲೇಜುಗಳ 8 ಲಕ್ಷ ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್‌ಗಾಗಿ ರೂ. 350 ಕೋಟಿಯಂತೆ ಹೆಚ್ಚುವರಿ ಅನುದಾನ ಎಲ್ಲವೂ ಸೇರಿ ರೂ.2132 ಕೋಟಿ ಆಗಲಿದೆ .

**ತುಲನಾತ್ಮಕ ವಿಶ್ಲೇಷಣೆ :** ಕರ್ನಾಟಕದ ಕೆಎಫ್‌ಆರ್‌ಎ (2002)ರ ನಿಯಮದಂತೆ ರಾಜ್ಯದ ಒಟ್ಟು ವಿತ್ತೀಯ ಕೊರತೆಯು GSDPಯ ಶೇ. 3ರ ಮಿತಿಯೊಳಗೆ ಇರಬೇಕಾಗಿದೆ. ಉಲ್ಲಂಘಿಸಿದಲ್ಲಿ ಕೇಂದ್ರ ಸರಕಾರದಿಂದ ಬರುವ ಕೆಲವು ಅನುದಾನಗಳು ರಾಜ್ಯಕ್ಕೆ ಸಿಗುವುದಿಲ್ಲ. ಹೀಗಾಗಿ ರಾಜಕೀಯ ಪಕ್ಷಗಳು ನೀಡುವ ಉಚಿತ ಯೋಜನೆಗಳ ಮೌಲ್ಯವನ್ನು ಕೆಎಫ್‌ಆರ್‌ಎ ನಿಯಮದ ಅಡಿಯಲ್ಲಿ ಕರ್ನಾಟಕದ ಆರ್ಥಿಕ ಆರೋಗ್ಯದ ಸಾಪೇಕ್ಷ ಪ್ರಭಾವ ಮತ್ತು ಪ್ರಭಾವದ ವ್ಯಾಪ್ತಿಯನ್ನು ವಿತ್ತೀಯ ಕೊರತೆ ಮತ್ತು ಜಿಎಸ್‌ಡಿಪಿಗೆ ಸಂಬಂಧಿಸಿದಂತೆ ವಿಶ್ಲೇಷಿಸಬೇಕಾಗಿದೆ. ಕೋಷ್ಟಕದಲ್ಲಿ ಈ ವಿವರಗಳನ್ನು ಕೊಡಲಾಗಿದೆ.

**ಕೋಷ್ಟಕ: ವಿತ್ತೀಯ ಕೊರತೆ ಮತ್ತು GSDPಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳು ಘೋಷಿಸಿರುವ ಉಚಿತಗಳು**

| ಉಚಿತ ಯೋಜನೆ | ಘೋಷಿಸಿರುವ ರಾಜಕೀಯ ಪಕ್ಷ | ರಾಜ್ಯದ ಮೇಲೆ ಉಚಿತ ಯೋಜನೆಗಳ ಭಾರ (ಕೋಟಿ ರೂ.ಗಳಲ್ಲಿ) | ಉಚಿತ ಯೋಜನೆಗಳ ಮೌಲ್ಯ, ವಿತ್ತೀಯ ಕೊರತೆ (ರೂ 60,531 ಕೋಟಿ)ಯ ಶೇ. ಭಾಗ | ವಿತ್ತೀಯ ಕೊರತೆ ಹಾಗೂ ಉಚಿತ ಯೋಜನೆಗಳ ಮೌಲ್ಯ, GSDP (ರೂ. 23.33ಲಕ್ಷ ಕೋಟಿ)ಯ ಶೇ. ಭಾಗ |
|---|---|---|---|---|
| ಗೃಹಜ್ಯೋತಿ + ಗೃಹಲಕ್ಷ್ಮಿ | ಕಾಂಗ್ರೆಸ್ | 56550 | 93.42 | 5.02 |
| ಕೃಷಿ ಸಾಲ ಮನ್ನಾ + ಉಚಿತ ವಿದ್ಯುತ್ | ಆಮ್‌ಆದ್ಮಿ | 62301 | 102.92 | 5.26 |
| ಗೃಹಿಣಿ ಶಕ್ತಿ + ಉಚಿತ ಬಸ್ ಪಾಸ್ | ಭಾಜಪ | 2132 | 3.52 | 2.69 |

ಕಾಂಗ್ರೆಸ್ ಘೋಷಿಸಿರುವ ಗೃಹಜ್ಯೋತಿ+ಗೃಹಲಕ್ಷ್ಮಿ ಯೋಜನೆಗಳ ಒಟ್ಟು ಉಚಿತ ಯೋಜನೆಗಳ ಮೌಲ್ಯ ರೂ. 56550 ಕೋಟಿಗಳಾಷ್ಟಗಿದ್ದು, ಇದು ಕರ್ನಾಟಕ ರಾಜ್ಯದ ವಿತ್ತೀಯ ಕೊರತೆಯ ಶೇ. 93.42ರಷ್ಟು ಆಗಿರುತ್ತದೆ. ಕಾಂಗ್ರೆಸ್ ಘೋಷಿಸಿರುವ ಒಟ್ಟು ಉಚಿತ ಯೋಜನೆಗಳ ಮೌಲ್ಯ ಮತ್ತು ವಿತ್ತೀಯ ಕೊರತೆ ರೂ. 1,17,081 ಕೋಟಿಗಳಾಗಿದ್ದು ಇದು ರಾಜ್ಯ GSDPಯ ಶೇ. 5.02 ರಷ್ಟು ಇರುತ್ತದೆ.

ಆಮ್‌ಆದ್ಮಿ ಪಕ್ಷದ ಕೃಷಿ ಸಾಲ ಮನ್ನಾ (ರೂ. 36201 ಕೋಟಿ)+ ಉಚಿತ ವಿದ್ಯುತ್ ಯೋಜನೆ (ರೂ.25830 ಕೋಟಿ)ಗಳ ಮೌಲ್ಯವು, ರೂ.62301 ಕೋಟಿಗಳು ಆಗಿದ್ದು ಇದು ಕರ್ನಾಟಕ ರಾಜ್ಯದ ವಿತ್ತೀಯ ಕೊರತೆಯ ಶೇ. 102.92ರಷ್ಟು ಆಗಿರುತ್ತದೆ. ಆಮ್‌ಆದ್ಮಿ ಪಕ್ಷವು ಘೋಷಿಸಿರುವ ಒಟ್ಟು ಉಚಿತ ಯೋಜನೆಗಳ ಮೌಲ್ಯ ಮತ್ತು ವಿತ್ತೀಯ ಕೊರತೆ (ರೂ.1,22,832 ಕೋಟಿ)ಯು, ರಾಜ್ಯ GSDP ಯ ಶೇಕಡಾ 5.26 ರಷ್ಟು ಇರುತ್ತದೆ. ಬಿಜೆಪಿ ಘೋಷಿಸಿರುವ ಗೃಹಿಣಿಶಕ್ತಿ + ಉಚಿತ ಬಸ್ ಪಾಸ್ ಯೋಜನೆಗಳ ಮೌಲ್ಯವು ರೂ. 2132 ಕೋಟಿಯಷ್ಟಿದ್ದು, ಇದು ಕರ್ನಾಟಕ ರಾಜ್ಯದ ವಿತ್ತೀಯ ಕೊರತೆಯ ಶೇ.3.52 ರಷ್ಟು ಆಗಿರುತ್ತದೆ. ಬಿಜೆಪಿ ಘೋಷಿಸಿರುವ ಒಟ್ಟು ಉಚಿತ ಯೋಜನೆಗಳ ಮೌಲ್ಯ ಮತ್ತು ವಿತ್ತೀಯ ಕೊರತೆ (ರೂ. 62,663 ಕೋಟಿ), ರಾಜ್ಯ GSDPಯ ಶೇ. 2.69 ರಷ್ಟು ಇರುತ್ತದೆ.

ಸ್ಪರ್ಧಾತ್ಮಕ ಜನಪ್ರಿಯತೆಯೊಂದಿಗೆ, ಕಾಂಗ್ರೆಸ್ಸಿನ ಒಟ್ಟು ಉಚಿತ ಯೋಜನೆಗಳು ವಿತ್ತೀಯ ಕೊರತೆಯ ಶೇ. 93.42 ರಷ್ಟು ಮತ್ತು GSDP ಯ ಶೇ. 5.02 ರಷ್ಟು ಆಗುತ್ತದೆ. ಆಮ್‌ಆದ್ಮಿ ಪಕ್ಷದ ಒಟ್ಟು ಉಚಿತ ಯೋಜನೆಗಳ ಮೌಲ್ಯ ವಿತ್ತೀಯ ಕೊರತೆಯ ಶೇ. 102.92ರಷ್ಟು ಹಾಗೂ GSDPಯ ಶೇ. 5.26 ರರಷ್ಟು ಆಗುತ್ತದೆ. ಬಿಜೆಪಿಯ ಒಟ್ಟು ಉಚಿತ ಯೋಜನೆಗಳು ವಿತ್ತೀಯ ಕೊರತೆಯ ಶೇ. 3.52% ರಷ್ಟು ಮತ್ತು GSDP ಯ ಶೇ. 2.69 ರಷ್ಟಿರುತ್ತದೆ.

ಕಾಂಗ್ರೆಸ್ಸಿನ ಒಟ್ಟು ಉಚಿತ ಯೋಜನೆಗಳ ಮೌಲ್ಯ ಮತ್ತು ವಿತ್ತೀಯ ಕೊರತೆ GSDPಯ ಶೇ. 5.02 ರಷ್ಟು ಆಗಿ, ವಿತ್ತೀಯ ಕೊರತೆಯ ನಿಯಮದ ಶೇ. 3 ರ ಮಿತಿಯನ್ನು ಉಲ್ಲಂಘಿಸುತ್ತದೆ. ಆಮ್‌ಆದ್ಮಿ ಪಕ್ಷದ ಒಟ್ಟು ಉಚಿತ ಯೋಜನೆಗಳ ಮೌಲ್ಯ GSDP ಯ ಶೇ. 5.26ರಷ್ಟು ಆಗಿ, ವಿತ್ತೀಯ ಕೊರತೆಯ ನಿಯಮದ ಶೇ. 3 ರ ಮಿತಿಯನ್ನು ಉಲ್ಲಂಘಿಸುತ್ತದೆ. ಬಿಜೆಪಿಯ ಒಟ್ಟು ಉಚಿತ ಯೋಜನೆಗಳ ಮೌಲ್ಯ GSDP ಯ ಶೇ. 2.69ರಷ್ಟು ಆಗಿ ವಿತ್ತೀಯ ಕೊರತೆಯ ನಿಯಮದ ಶೇ. 3 ರ ಮಿತಿಯನ್ನು ಪಾಲಿಸಿ ಗೌರವಿಸುತ್ತದೆ.

ಕಾಂಗ್ರೆಸ್ಸಿನ ಒಟ್ಟು ಉಚಿತ ಯೋಜನೆಗಳ ಭಾರ ಹಾಗೂ ಆಮ್‌ಆದ್ಮಿ ಪಕ್ಷದ ಒಟ್ಟು ಉಚಿತ ಯೋಜನೆಗಳ ಭಾರ ವಿತ್ತೀಯ ಕೊರತೆಯನ್ನು ಬಹುತೇಕ ದುಪ್ಪಟ್ಟುಗೊಳಿಸುವ ಮೂಲಕ ಕರ್ನಾಟಕದ ಆರ್ಥಿಕತೆಗೆ ಅಪಾಯವನ್ನುಂಟು ಮಾಡುವ ಸನ್ನಿವೇಶಕ್ಕೆ ದೂಡುತ್ತವೆ. ಬಿಜೆಪಿಯ ಒಟ್ಟು ವಿತ್ತೀಯ ಕೊರತೆಯ ಭಾರ ಜಿಎಸ್‌ಡಿಪಿಯ 2.69% ರಷ್ಟು ಆದ್ದರಿಂದ ಅದು ವಿತ್ತೀಯ ಕೊರತೆಯ ಶೇ.3 ರ ಮಿತಿಯ ನಿಯಮವನ್ನು ಮೀರದೆ ಕರ್ನಾಟಕದ ಆರ್ಥಿಕ ಆರೋಗ್ಯ ಹಾಗೂ ಕ್ಷೇಮವನ್ನು ಕಾಪಾಡುವ ಹಿತದೃಷ್ಟಿಯನ್ನು ಹೊಂದಿದೆ. ಹೀಗಾಗಿ ಮತದಾರರು ತಮ್ಮ ವಿವೇಚನೆಯನ್ನು ಉಪಯೋಗಿಸಿ ಹೊಣೆಯರಿತ ರಾಜಕೀಯ ಪಕ್ಷಕ್ಕೆ ಮತ ನೀಡುವುದು ಮುಖ್ಯವಾಗಿದೆ. ಉಚಿತ ಕೊಡುಗೆಗಳ ಭಾರವು ರಾಜ್ಯದ ಪಾಲಿಗೆ ಕುತ್ತಿಗೆಗೆ ಕಟ್ಟಿದ ಕಲ್ಲಿನಂತಾಗದಂತೆ ಎಚ್ಚರ ವಹಿಸಬೇಕಾಗಿದೆ.

# ದೂತಾವಾಸದ ಮೇಲೆ ದಾಳಿ: ಭಾರತದ ಕ್ಷಿಪ್ರ ತಿರುಗೇಟು

ಇಂಗ್ಲೆಂಡಿನಲ್ಲಿ ಭಾರತ ವಿರೋಧಿ ಚಟುವಟಿಕೆಗಳು ನಡೆಯುವುದನ್ನು ಭಾರತವು ಸಹಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಮೋದಿ ಸರಕಾರವು ರವಾನಿಸಿದೆ.

■ ದಿನೇಶ್ ನಾಯಕ್

ಬ್ರಿಟನ್‌ನಲ್ಲಿ ಭಾರತೀಯ ದೂತಾವಾಸದ ಮೇಲೆ ಖಲಿಸ್ಥಾನ ಬೆಂಬಲಿಗರು ನಡೆಸಿದ ದಾಳಿಯ ಬೆನ್ನಿಗೇ ಭಾರತವು ಪ್ರತಿಕ್ರಿಯಿಸಿದ ರೀತಿ ಶ್ಲಾಘನೆಗೆ ಅರ್ಹವಾದುದು. ಬ್ರಿಟಿಷ್ ಸರಕಾರವು ಭಾರತೀಯ ದೂತಾವಾಸಕ್ಕೆ ಸೂಕ್ತ ಭದ್ರತೆ ನೀಡದಿರುವ ಹಿನ್ನೆಲೆಯಲ್ಲಿ ಇತ್ತ ಭಾರತ ಕೂಡಾ ಬ್ರಿಟಿಷ್ ದೂತಾವಾಸದ ಸುತ್ತ ಹಾಕಿದ್ದ ಭದ್ರತಾ ಬೇಲಿಯನ್ನು ತೆರವುಗೊಳಿಸಿತು. ಬ್ರಿಟಿಷ್ ರಾಯಭಾರಿಯನ್ನು ಮಧ್ಯ ರಾತ್ರಿಯೆ ಕರೆಸಿಕೊಂಡು ಸ್ಪಷ್ಟ ಮಾತುಗಳಲ್ಲಿ ಇಂತಹ ಘಟನೆಗಳು ನಡೆಯಬಾರದೆಂದು ತಿಳಿಸಿತು. ಆ ಮೂಲಕ ತಾನು ಹಿಂದಿನ ಭಾರತವಲ್ಲ ಎಂಬುದನ್ನು ಶ್ರುತಪಡಿಸಿತು. ದಶಕಗಳ ಹಿಂದಾಗಿದ್ದರೆ ಭಾರತವು ಭದ್ರತೆಯನ್ನು ಹೆಚ್ಚಿಸುವಂತೆ ಮನವಿ ಮಾಡುತ್ತಿತ್ತು. ಅದಕ್ಕಿಂತ ಹೆಚ್ಚೆಂದರೆ ತನ್ನ ಖಂಡನೆಯನ್ನು ವ್ಯಕ್ತಪಡಿಸಿ ಸುಮ್ಮನಾಗುತ್ತಿತ್ತು. ಅದರ ಜತೆಗೇ ಭಾರತವು ಸಹನೆ ಕಾಯ್ದುಕೊಳ್ಳಬೇಕೆಂದೂ, ಆತುರದ ಪ್ರತಿಕ್ರಿಯೆ ತೋರಬಾರದೆಂದೂ ಒಂದಿಷ್ಟು ಮಾಧ್ಯಮಗಳು, ಪರಿಣತರು ಭಾರತ ಸರಕಾರಕ್ಕೆ ಕಿವಿಮಾತು ಹೇಳಿ ಸುದೀರ್ಘ ಲೇಖನ ಬರೆಯುತ್ತಿದ್ದರು. ಇದೀಗ ಭಾರತದ ಸರಕಾರದ ಕ್ಷಿಪ್ರ ಪ್ರತಿಕ್ರಿಯೆಯಿಂದಾಗಿ ಬ್ರಿಟನ್ ಸರಕಾರವು ತನ್ನಲ್ಲಿನ ಭಾರತೀಯ ದೂತಾವಾಸದ ಸುತ್ತಲಿನ ಭದ್ರತೆಯನ್ನು ಹೆಚ್ಚಿಸಿದೆ.

ಇತ್ತೀಚಿನ ದಿನಗಳಲ್ಲಿ ವಿವಿಧ ದೇಶಗಳಲ್ಲಿ ಖಲಿಸ್ಥಾನವಾದಿಗಳಿಂದ ಭಾರತದ ಮೇಲೆ ದಾಳಿಗಳು ಹೆಚ್ಚುತ್ತಿವೆ. ಇದು ಭಾರತದ ಮೇಲೆ ನಡೆಯುತ್ತಿರುವ ದಾಳಿ ನಿಜ. ಅದಕ್ಕಿಂತಲೂ ಮುಖ್ಯವಾಗಿ ಇದು ಹಿಂದುಗಳನ್ನು ಗುರಿಯಾಗಿಟ್ಟುಕೊಂಡು ನಡೆಯುತ್ತಿರುವ ದಾಳಿ. ಏಕೆಂದರೆ ಅಮೆರಿಕ, ಕೆನಾಡ, ಆಸ್ಟ್ರೇಲಿಯಾ, ಬ್ರಿಟನ್‌ಗಳಲ್ಲಿ ಹಿಂದೂ ದೇವಾಲಯಗಳ ಮೇಲೆ ದಾಳಿ ನಡೆಯಿತೇ ಹೊರತು, ಮಸೀದಿ, ಚರ್ಚ್‌ಗಳ ಮೇಲಲ್ಲ. ಹಾಗಾಗಿ ಖಲಿಸ್ಥಾನವಾದಿಗಳ ಗುರಿ ಹಿಂದುಗಳೇ ಆಗಿದ್ದಾರೆ.



ಆದರೆ ಒಂದು ವಿಷಯ ಮಾತ್ರ ಕಳವಳಕಾರಿಯಾದುದು. ವಿದೇಶಗಳಲ್ಲಿರುವ ಸಿಖ್ ಕುಟುಂಬಗಳು ಭಾರತೀಯ ಸನಾತನ ಧರ್ಮದೊಂದಿಗೆ ಹೇಗೆ ತಮ್ಮ ಸಂಬಂಧವನ್ನು ಕಳಕೊಳ್ಳುತ್ತಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತಿದೆ. ಈಗಿನ ಪೀಳಿಗೆಯ ಸಿಕ್ಖರಿಗೆ ಸಿಕ್ ಮತದ ಉದಯ ಹಾಗೂ ಅದರ ಸಂಸ್ಥಾಪಕರ ಉದಾತ್ತ ಮೌಲ್ಯಗಳ ಅರಿವಿಲ್ಲವೆಂಬುದು ಸಾಬೀತಾಗುತ್ತಿದೆ. ಶತಮಾನದಿಂದ ಸಿಕ್ಖರು ಮತ್ತು ಹಿಂದುಗಳ ಮಧ್ಯೆ ಬೆಸೆದುಕೊಂಡು ಬಂದ ಸೈದ್ಧಾಂತಿಕ ಮತ್ತು ಧಾರ್ಮಿಕ ಏಕತೆಯು ಕಾಂಗ್ರೆಸಿನ ರಾಜಕೀಯದಾಟದಿಂದಾಗಿ ಹಾಳಾಗಿದೆ. ಇಂದಿರಾಗಾಂಧಿ ಅಂದು ಸಿಕ್ಖರನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲೆತ್ನಿಸಿದರು. ಆದರೆ ಅದರಲ್ಲಿ ಅವರು ಹೆಚ್ಚು ಸಫಲರಾಗಲಿಲ್ಲ. ಅವರೇ ತಮ್ಮ ಜೀವ ಬಲಿಕೊಡಬೇಕಾಯಿತು.

ಇದೀಗ ಖಲಿಸ್ಥಾನ ಚಳವಳಿಯು ಮತ್ತೆ ಚಿಗಿತುಕೊಳ್ಳುತ್ತಿರುವುದು, ಉಗ್ರವಾದಿ ಧೋರಣೆ ತಳೆಯುತ್ತಿರುವುದು ಹಠಾತ್ತಾಗಿ ಉಂಟಾದ ಬೆಳವಣಿಗೆಯೇನೂ ಅಲ್ಲ. ಅದು ಅನಿರೀಕ್ಷಿತವೂ ಅಲ್ಲ. ಕಳೆದ ಪಂಜಾಬ್ ಚುನಾವಣೆಯ ಸಂದರ್ಭದಲ್ಲೆ ಇದರ ಸೂಚನೆ ಲಭಿಸಿತ್ತು. ಆಮ್ ಆದ್ಮಿ ಪಕ್ಷಕ್ಕೆ ಖಲಿಸ್ಥಾನವಾದಿಗಳ ಬೆಂಬಲವಿದೆಯೆಂದು ಆಗಲೇ ಮಾತುಗಳು ಕೇಳಿಬಂದಿದ್ದವು. ಆಪ್ ಅಲ್ಲಿ ಸರಕಾರ ರಚಿಸಿದ ಬಳಿಕವಂತೂ ಖಲಿಸ್ಥಾನ ಚಳವಳಿಗೆ ಇನ್ನಷ್ಟು ವೇಗ ದೊರಕಿತ್ತು. ಅಮೃತ್‌ಪಾಲ್ ಸಿಂಗ್ ಪ್ರಕರಣವು ಘಟಿಸುವುದಕ್ಕೆ ಕ್ಷಣಗಣನೆ ಆರಂಭವಾಗಿತ್ತು. ಇದೀಗ ಅಮೃತ್‌ಪಾಲ್ ಏನು ಮಾಡಲು ಹೊರಟಿದ್ದಾನೋ ಅದಕ್ಕೆ ಆಪ್ ಸರಕಾರದ ಗುಪ್ತ ಬೆಂಬಲವಿತ್ತು.

ಈ ಖಲಿಸ್ಥಾನ ಚಳವಳಿಗೆ ಎರಡು ಮೂಲಗಳಿಂದ ಬೆಂಬಲ ದೊರಕಲು ಆರಂಭವಾಗಿತ್ತು. ಒಂದನೆಯದಾಗಿ ಖಲಿಸ್ಥಾನ ಚಳವಳಿಯ ಕಠೋರ ಬೆಂಬಲಿಗರಿಂದ ಸೈದ್ಧಾಂತಿಕ ಬೆಂಬಲ ಮತ್ತು ಎರಡನೆಯದಾಗಿ ಕಾಶ್ಮೀರ ಪ್ರತ್ಯೇಕತಾವಾದಿಗಳು, ಐಎಸ್‌ಐ ಮುಂತಾದ ಭಯೋತ್ಪಾದಕ ಸಂಘಟನೆಗಳ ಬೆಂಬಲ. ಆದರೆ ಭಾರತದಲ್ಲಿರುವ ಬಹ್ವಂಶ ಸಿಕ್ಖರಿಗೆ ದೇಶದಿಂದ ಬೇರ್ಪಟ್ಟು ಪ್ರತ್ಯೇಕ ಖಲಿಸ್ಥಾನ ಕಟ್ಟಬೇಕೆಂಬ ಉಮೇದಿಲ್ಲ. ಅವರು ಖಲಿಸ್ಥಾನವನ್ನು ಬೆಂಬಲಿಸುವುದೂ ಇಲ್ಲ.

ಬ್ರಿಟನ್ ದೂತಾವಾಸದ ಮೇಲೆ ನಡೆದ ವಿಷಯಕ್ಕೆ ಬರುವುದಾದರೆ ಮೊದಲಿನಿಂದಲೂ ಬ್ರಿಟನ್‌ನಲ್ಲಿ ಪಾಕಿಸ್ಥಾನಕ್ಕೆ ಬೆಂಬಲ ಹೆಚ್ಚು. ಅದಕ್ಕೆ ಪೂರಕವಾಗಿ ಪಾಕಿಸ್ಥಾನದಿಂದ ಬ್ರಿಟನ್‌ಗೆ ತೆರಳಿರುವ ಜನರ ಸಂಖ್ಯೆಯೂ ಸಾಕಷ್ಟಿದೆ. ಪಾಕಿಸ್ಥಾನಿ ಮುಸ್ಲಿಮರು ಅಲ್ಲಿ ಗಣನೀಯ ಮತಬ್ಯಾಂಕ್ ಸೃಷ್ಟಿಸಿದ್ದಾರೆ. ಪಾಕಿಸ್ಥಾನಿ ಬ್ರಿಟಿಷ್ ಮುಸ್ಲಿಮ್ ಆಗಿರುವ ಸಾದಿಕ್ ಖಾನ್ ಈಗ ಮೇಯರ್ ಆಗಿದ್ದು ಭಾರತ ವಿರೋಧಿ ಮತ್ತು ಹಿಂದೂ ವಿರೋಧಿ ನಿಲುವಿನಿಂದ ಕುಖ್ಯಾತನಾಗಿದ್ದಾನೆ.

ಬ್ರಿಟಿಷ್ ವ್ಯವಸ್ಥೆಯಲ್ಲಿರುವ ಕೆಲವು ಪ್ರಭಾವಿ ಶಕ್ತಿಗಳು ಇನ್ನೂ ಬ್ರಿಟಿಷ್ ರಾಜ್ ಮಾನಸಿಕತೆಯಿಂದ ಹೊರಬಂದಿಲ್ಲ. ಭಾರತವು ಪ್ರಭಾವಿ, ಶಕ್ತಿಶಾಲಿ ರಾಷ್ಟ್ರವಾಗಿ ಮೂಡಿಬರುತ್ತಿರುವುದನ್ನು ಅವರಿಂದ ಸಹಿಸಲಾಗುತ್ತಿಲ್ಲ. ಭಾರತೀಯ ಮೂಲದ ರಿಷಿ ಸುನಾಕ್ ತಮ್ಮ ದೇಶದ ಪ್ರಧಾನಿಯಾಗಿರುವುದನ್ನೂ ಅವರಿಂದ ಸೈರಿಸಲಾಗುತ್ತಿಲ್ಲ.

ಪಾಕ್ ಮೂಲದ ಮುಸ್ಲಿಮರು ಇಂಗ್ಲೆಂಡಿನಲ್ಲಿ ಅಧಿಕ ಸಂಖ್ಯೆಯಲ್ಲಿ ಇರುವುದರಿಂದಾಗಿ ಐಎಸ್‌ಗೆ ಅಲ್ಲಿ ಕೂಡಾ ಭಾರತ ವಿರೋಧಿ ಭಾವನೆಯನ್ನು ಉದ್ದೀಪಿಸುವುದು ಕಷ್ಟವಾಗುತ್ತಿಲ್ಲ. ಖಲಿಸ್ಥಾನ ಆಂದೋಲನಕ್ಕೆ ಕೂಡ ಐಎಸ್‌ಐ ಕುಮ್ಮಕ್ಕು ನೀಡುತ್ತಿರುವುದು ರಹಸ್ಯ ವಿಚಾರವೇನೂ ಅಲ್ಲ. ಜಿಹಾದಿ ಶಕ್ತಿಗಳೂ ಈಗ ಬ್ರಿಟನ್‌ನಲ್ಲಿ ಹೆಚ್ಚುತ್ತಿವೆ.

ಭಾರತದಲ್ಲಿ ದುರ್ಬಲ ಸರಕಾರವಿದ್ದಾಗ ಇಂಗ್ಲೆಂಡಿನಲ್ಲಿ ನಡೆಯುತ್ತಿರುವ ಭಾರತ ವಿರೋಧಿ ಚಟುವಟಿಕೆಗಳಿಗೆ ಕಡಿವಾಣವಿರಲಿಲ್ಲ. ಆದರೆ ಈಗ ಭಾರತದಲ್ಲಿ ಪ್ರಬಲ ಸರಕಾರವಿದೆ. ದೇಶದ ಆರ್ಥಿಕತೆಯೂ ಬಲಿಷ್ಠವಾಗಿದೆ. ಇಂಗ್ಲೆಂಡಿನಲ್ಲಿ ಭಾರತ ವಿರೋಧಿ ಚಟುವಟಿಕೆಗಳು ನಡೆಯುವುದನ್ನು ಭಾರತವು ಸಹಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಮೋದಿ ಸರಕಾರವು ರವಾನಿಸಿದೆ.

ಭಾರತವು ದಿಲ್ಲಿಯಲ್ಲಿರುವ ಬ್ರಿಟಿಷ್ ದೂತಾವಾಸದ ಸುತ್ತಲಿನ ತಡೆಗೋಡೆಯನ್ನು ತೆಗೆದುದು ಬ್ರಿಟಿಷ್ ಸರಕಾರಕ್ಕೆ ಸೂಕ್ತ ಸಂದೇಶವನ್ನೆ ರವಾನಿಸಿದೆ. ತಾನು ವ್ಯವಹರಿಸುತ್ತಿರುವ ಈಗಿನ ಭಾರತವು ಬೇರೆಯೇ ಆಗಿದೆ ಎಂಬ ಅರಿವನ್ನು ಮೂಡಿಸಿದೆ.